**ಸಿ.ಸಿ. ಸಂಖ್ಯೆ: 144/2019**
ಪಿಡಬ್ಲ್ಯೂ: 1
ಸಿಡಬ್ಲ್ಯೂ: 1

ದಿನಾಂಕ : 20.04.2024 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ :**

ನಾನು ಕಳುವಾದ ವಸ್ತುವಿನ ಬಿಲ್ಲುಗಳನ್ನು ಮತ್ತು ಉಳಿದ ಮೊಬೈಲಗಳನ್ನು ಟ್ಯಾಲಿ ಮಾಡಿ ನೋಡಲು ಮತ್ತು ಬಿಲ್ಲುಗಳನ್ನು ಹೊಂದಿಸಲು ಸಮಯ ತೆಗೆದುಕೊಂಡಿದ್ದರಿಂದ ದೂರನ್ನು ನೀಡಲು ತಡವಾಯಿತು. ಜಪ್ತುವಾದ ಮೊಬೈಲಗಳನ್ನು ಠಾಣೆಯಲ್ಲಿ ದಿಃ 22.01.2019 ರಂದು ನಾನು ಠಾಣೆಯಿಂದ ಬಿಡಿಸಿಕೊಂಡಿರುತ್ತೇನೆ. ಆ ಸಮಯದಲ್ಲಿ ಶ್ರೀನಿವಾಸ ಕಲಕೋಟೆ ಮತ್ತು ಕಾಂತೇಶ ಬಂಡಿವಡ್ಡರ ಹಾಜರಿದ್ದರು. ಸದರಿ ಜಪ್ತು ಮಾಡಿದ ಮಾಲನ್ನು ನನಗೆ ಬಿಟ್ಟುಕೊಟ್ಟ ಪಂಚನಾಮೆಯನ್ನು ಬೆಳಗ್ಗೆ 10.00 ಸ ರಿಂದ 12.00 ರವರೆಗೆ ಬ್ಯಾಡಗಿ ಪೋಲೀಸ್ ಠಾಣೆಯಲ್ಲಿ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿ-42 ಎಂದು, ಸಾಕ್ಷಿಯ ಸಹಿಯನ್ನು 42(ಎ) ಎಂದು ಗುರುತಿಸಲಾಯಿತು. ನಾನು ಬಿಡಿಸಿಕೊಂಡ ಹೋದ ಮೊಬೈಲಗಳನ್ನು ಗುರುತಿಸುತ್ತೇನೆ. ಸದರಿ ಮೊಬೈಲಗಳ ಭಾವಚಿತ್ರಗಳನ್ನು ಈಗಾಗಲೇ ನಿಪಿ-10 ರಿಂದ ನಿಪಿ-22 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :**

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಪಾಟೀ ಸವಾಲನ್ನು ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸ ಅದೆ.

ಸಹಿ/–
ಜೆಎಂಎಫ್‌ಸಿ, ಬ್ಯಾಡಗಿ.